ದಯಮಾಡೋ ರಂಗ ದಯಮಾಡೋ

ದಯಮಾಡೋ ನಾನಿನ್ನ ದಾಸ ನಾನೆಂದು

ಹಲವು ಕಾಲವು ನಿನ್ನ ಹಂಬಲ ಎನಗೆ

ಒಲಿದು ಪಾಲಿಸಬೇಕು ವಾರಿಜನಾಭ

ಇಹಪರ ಗತಿ ನೀನೇ ಇಂದಿರ ರಮಣ

ಸಹಾಯ ನಿನ್ನದೆ ಸರ್ವದಾ ತೋರಿ ಕರುಣ

ಕರಿರಾಜ ವರದನೇ ಕಾಮಿತ ಫಲದ

ಪುರಂದರವಿಠಲನೆ ಹರಿ ಸಾರ್ವಭೌಮ